ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹಿರಿಯೂರು

ಸಿ.ಸಿ.ನಂ.2152/2021

ಪಿರ್ಯಾದುದಾರರು : ಬಿ.ಟಿ ತಿಮ್ಮರಾಜು
ತಂದೆ ಡಿ. ತಿಮ್ಮಣ್ಣ, 45 ವರ್ಷ
ವಾಸಃ ಬಬ್ಬೂರು ಗ್ರಾಮ,
ಹಿರಿಯೂರು ತಾಲ್ಲೂಕು
ಚಿತ್ರದುರ್ಗ ಜಿಲ್ಲೆ

ವಿರುದ್ಧ

ಆರೋಪಿ : ಪಿ. ನಾಗರಾಜ
ತಂದೆ ಪಾಪಣ್ಣ, 51 ವರ್ಷ
ವಾಸಃ ಭೋವಿ ಕಾಲೋನಿ,
ಬಬ್ಬೂರು ಗ್ರಾಮ,
ಹಿರಿಯೂರು ತಾಲ್ಲೂಕು

ಃ ಆಪಾದನೆ ಃ

ದಿನಾಂಕಃ 30.11.2020 ರಂದು ಆರೋಪಿಯಾದ ನೀವು ಫಿಯಾರ್ದುದಾರರಿಂದ ನಿಮ್ಮ ಅವಶ್ಯಕತೆಗಾಗಿ ರೂ . 3,80,000/- ಹಣವನ್ನು ಸಾಲವಾಗಿ ಪಡೆದಿದ್ದು, ಆ ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು 280291 ನಂಬರಿನ 30.12.2020 ರ ದಿನಾಂಕವನ್ನು ನಮೂದಿಸಿದ ರೂ . 3,80,000/- ಮೊತ್ತದ ಕರ್ನಾಟಕ ಬ್ಯಾಂಕ್, ಬಬ್ಬೂರು ಶಾಖೆಯ ಚೆಕ್‌ನ್ನು ನೀಡಿದ್ದು, ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀಕರಣಕ್ಕೆ ಕರ್ನಾಟಕ ಬ್ಯಾಂಕ್, ಬಬ್ಬೂರು ಶಾಖೆಗೆ ದಿಃ 30.12.2020 ರಂದು ಹಾಜರು ಪಡಿಸಿದ್ದು ದಿನಾಂಕ 30.12.2020 ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಆ ಚೆಕ್ ಅಮಾನ್ಯಗೊಂಡಿದ್ದು ಆ ಬಗ್ಗೆ ದಿನಾಂಕಃ 19.01.2021 ರಂದು ಪಿರ್ಯಾದುದಾರರು ನಿಮಗೆ ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ 21.01.2021 ರಂದು ಜಾರಿಯಾಗಿದ್ದರೂ ಸಹ ನೀವು ಅವರಿಗೆ ಹಣ ಕೊಡದೇ ಇದ್ದುದರಿಂದ ಆ ಮೂಲಕ ನೀವು ನೆಗೋಷಿಯೇಬಲ್ ಆಕ್ಟ್ ನ ಕಲಂ 138 ರಡಿಯಲ್ಲಿ ಅಪರಾದ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ .

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆಪಾದನೆ  ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು  ಒಪ್ಪಿಕೊಳ್ಳುತ್ತೀರಾ  ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **10.11.2022**
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಹಿರಿಯೂರು